ತುಂಬಿಕೊಳ್ಳೋದರಲ್ಲಿ ಬಿಜಿಯಾಗಿದ್ದರು.

ಬೆಡ್ ಸಿಗದೇ ಕಾರಿಡಾರಿನಲ್ಲಿ, ಗಿಡಗಳ ಕಟ್ಟೆಗಳ ಮೇಲೆ ನರಳುತ್ತಾ ಮಲಗಿರೋ ರೋಗಿಗಳಿಗೆ ಗಣೇಶ ಮತ್ತು ಅವನ ಗೆಳೆಯರು ಆಹಾರ ಪೊಟ್ಟಣಗಳನ್ನ ನೀರಿನ ಬಾಟ್ಲಗಳನ್ನ ವಿತರಿಸುವ ಕೆಲಸದಲ್ಲಿ ತೊಡಗಿದ್ದರು.

ಆ ದಿನ ಗಣೇಶ ತನ್ನ ಗೆಳೆಯ ಜಗದೀಶನಿಗಾಗಿ ಆಸ್ಪತ್ರೆಯ ಆವರಣದಲ್ಲಿ ಕಾಯ್ತಾ ಇದ್ದ. ಅವನೂ ಕೊರೊನಾ ಸೈನಿಕ ತಂಡದಲ್ಲಿದ್ದವ. ಅವ ಮೆಡಿಕಲ್ ರಿಪ್ರಜೆಂಟೇಟಿವ್ ಆಗಿದ್ದರಿಂದ ಪ್ರಾಥಮಿಕ ಅಗತ್ಯಗಳನ್ನ ಪೂರೈಸುವ ಔಷಧಗಳ ಕಿಟ್ಟನ್ನ ಹೊರ ರೋಗಿಗಳಿಗೆ ಉಚಿತವಾಗಿ ನೀಡಲು ಮುಂದಾಗಿದ್ದ. ಮುಂಜಾನೆ ಒಂಬತ್ತೂವರೆಗೆ ಆಸ್ಪತ್ರೆಯ ಆವರಣದಾಗ ಇರ್ತೀನಿ ಅಂತ ಹೇಳಿದವ ಹನ್ನೊಂದಾದರೂ ಪತ್ತೆ ಇಲ್ಲ. ಸುತ್ತ ಹಳ್ಳಿಗಳಿಂದ ಬಂದು ತಪಾಸಣೆಗಾಗಿ ಕಾಯ್ದಿರುವ ರೋಗಿಗಳಿಗೆ ಕೆಲವು ಔಷಧಿಗಳನ್ನು ನೀಡಬೇಕಿತ್ತು. ಕೆಲವು ದಾನಿಗಳು ಹಣ್ಣು, ಬ್ರೆಡ್ ಕೊಡಿಸಿದ್ದರು. ಹೊರಗ ಏನೂ ಸಿಗುವಂತಿರಲಿಲ್ಲ. ಅವುಗಳನ್ನ ಹಂಚುತ್ತ ಅವನ ದಾರಿ ಕಾಯತಾ ಇದ್ದರು. ಅವ ಬರುತ್ತಲೇ ತನ್ನ ಬಳಿ ಇದ್ದ ಇಪ್ಪತ್ತು ಕಿಟ್ಟುಗಳನ್ನ ಕೊಟ್ಟ. ತೀರಾ ಅಗತ್ಯ ಆಗಿರುವ ರೋಗಿಗಳಿಗೆ ಗಣೇಶ ಅವುಗಳನ್ನು ಹಂಚಿ ಬಂದು ಕೂತಾಗ ಜಗದೀಶನಿಗೆ ಯಾಕ ತಡ ಅಂತ ಕೇಳಿದರೆ ಅವ ತನ್ನ ಮಾಮಾ ಇರುವ ಬಸವೇಶ್ವರ ನಗರ ಏರಿಯಾವನ್ನ ಲಾಕ್‌ಡೌನ್ ಮಾಡಿದ್ದರಿಂದ ಅವರಿಗೆ ಕೆಲವು ಔಷಧಿಗಳನ್ನ, ಹಣ್ಣುಹಂಪಲು, ಕಾಯಿಪಲ್ಲೆಗಳನ್ನ ಕೊಟ್ಟು ಬರಬೇಕಿತ್ತು ಅಂದ.

'ನಿಮ್ಮ ಮಾಮಾ ಅಂದ್ರ?'

'ಅವರು ನನ್ನ ತಂದೆಯ ತಂಗಿಯ ಗಂಡ, ಪ್ರೊಫೆಸರ್ ಸಿದ್ದಪ್ಪ ಅಂತ.'

'ಅರೆ, ಅವರಾ! ನನ್ನ ಕಸ್ಟಮರ್.'

'ಏನು? ಹ್ಯಾಗೆ?'

ಆಗ ಅವ ತಾನು ತಗಡಿನ ಷೀಟ್ ಹೊದಿಸಬೇಕಾದ ವಿವರ ಹೇಳಿದ.

'ಓ, ನೀವಾs! ನಮ್ಮತ್ತಿ ನಿಮಗ ಮಂಗಳಾರತಿ ಚಲೋ ಮಾಡತಿದ್ದರು, ಬೇಗ ಕೆಲಸಾ ಮಾಡಿಕೊಡದ್ದರಿಂದ ಅವರ ಮನಿ ಸೋರತಾ ಇದ್ದದ್ದಕ್ಕ.'

'ಅವರಿಗನಿಸೋದು ಸಹಜ. ಕೈಯಾಗ ಕೆಲಸ ಬಾಳ ಇದ್ದವು. ಇನ್ನ ಸುರು ಮಾಡಬೇಕಂದ್ರ ಕೊರೊನಾ ಆರ್ಭಟ ಸುರು ಆತು. ಕೆಲಸಗಾರರು ಬಿಟ್ರು, ನನ್ನ ಅಸಿಸ್ಟೆಂಟ್ ಸಲೀಮ ಸತ್ತ. ಈಗಂತೂ ಹೊಳ್ಳಿ ನೋಡದ ಪರಿಸ್ಥಿತಿ,ಜೀವ ಸಾವಿನ ಹೋರಾಟ. ಈ ಕಷ್ಟ ಕಾಲದಾಗ ಸ್ವಯಂಸೇವಕರಾಗಿ ಸೇವಾ ಸಲ್ಲಿಸೋದು ಅಂತ ನಿರ್ಧಾರ ತಗೊಂಡಿದ್ದಂತೂ ನಿಮಗ ಗೊತ್ತೇ ಐತಲ್ಲ?'

ಹೀಂಗ ಆಸ್ಪತ್ರೆಯ ಆವರಣದಲ್ಲಿ ಅರಳಿಮರದ ಕೆಳಗೆ ಗಣೇಶ, ಜಗದೀಶ ಮಾತಾಡತಾ ಕೂತಿರುವಾಗ ಡಾಕ್ಟರ್ ಸುರೇಶ ಅವರಿಂದ ಫೋನ್ ಕರೆ ಬಂತು. 'ತೇಜಸ್ವಿ ನಗರದಿಂದ ಒಬ್ಬರು ಫೋನು ಮಾಡಿದ್ದರು. ತಮ್ಮ ಮಗ್ಗಲ ಮನಿಯಲ್ಲಿ ಒಂಟಿಯಾಗಿರೋ ಒಬ್ಬ ವ್ಯಕ್ತಿ ಸುಮಾರು ಹತ್ತು ದಿನಗಳಿಂದ ಹೊರ ಬಂದಿಲ್ಲಂತ. ಅವರ ಮನಿಯಿಂದ ದುರ್ವಾಸನಿ ಬರ್ತಿದೆಯಂತ, ಅವರು ತೀರಿಕೊಂಡಾರಂತ. ಆ ಶವಸಂಸ್ಕಾರ ಮಾಡಬೇಕಾಗೇದ. ನೀವು ಅಲ್ಲಿಗೆ ಹೋಗ್ತೀರಾ?'

'ಆಗಲಿ ಸರ್, ಹೋಗತೀವಿ.'

ಗಣೇಶ ಮತ್ತು ಜಗದೀಶ ತಮ್ಮ ಪಿಪಿಇ ಪೋಷಾಕಿನಲ್ಲಿ ಆ ಮನಿಯ ಬಾಗಿಲಿಗೆ ಬಂದರು. ಬರುತ್ತಲೇ ಕೆಟ್ಟ ವಾಸನೀ ಹೊಡೀತು. ಇವರ ಸುಳಿವು ಸಿಗತಲೇ ಆಜೂ ಬಾಜಿನವರು ಬಾಗಲಾ ಕಿಡಕಿ ಹಾಕ್ಕೊಂಡರು. ಬಾಗಲಾ ಮುರಿಯೋದು ಅನಿವಾರ್ಯ ಅಂತ ಕಂಡುಕೊಂಡು ಕಾರ್ಯೋನ್ಮುಖರಾದರು. ಗರಡೀಮನಿಯ ಆಳಿನ ಹಾಂಗ ಇದ್ದ ಜಗದೀಶ ಜೋರಾಗಿ ನಾಕಾರು ಬಾರಿ ಒದ್ದಾಗ ಒಂದು ಪಡಕು ಕಿತಗೊಂಡು ಬಂತು. ಗಣೇಶ ಅದನ್ನ ತೆಗೆದು ಹೊರಗಿಟ್ಟ... ಗಬ್ಬು ವಾಸನಿ ಒಳಗಿಂದ ತೂರಿ ಅವರ ಮಾಸ್ಕು, ಶೀಲ್ಡು ಭೇದಿಸಿ ನುಗ್ಗಿಬಂತು. ಕಷ್ಟಪಟ್ಟು ಸಹಿಸಿಕೊಳ್ತಾ ನಿಧಾನಕ್ಕೆ ಒಂದೊಂದೇ ಹೆಜ್ಜೆ ಇಡತಾ ಮುಂದ ಬಂದರು. ಮುದುಕ ಹೇಲು ಉಚ್ಚೆಯ ಕೊಚ್ಚೆಯಲ್ಲಿ ಬಿದ್ದಿದ್ದಾನೆ. ನೊಣಗಳು ಮುಕರಿವೆ. ಪುಣ್ಯಕ್ಕೆ ನಳದಲ್ಲಿ ನೀರಿದ್ದವು. ಹೆಣವನ್ನ ಜಗದೀಶ ಎತ್ತಿಕೊಂಡು ಬಚ್ಚಲಕ್ಕ ಬಂದ. ಗಣೇಶ ನಳಕ್ಕ ಪೈಪು ಹಚ್ಚಿ ನೀರು ಬಿಡತಾ ತೊಳೀತಾ ಇರುವಾಗ ಮೂಗಿಗೆ ಕೈ ತಾಕಿತು. 'ಅರೆ, ಉಸಿರಾಟ ಐತಿ' ಅಂದ. 'ಚಮಚೆ ಇದ್ರ ತಾರೋ, ಬಾಯಿಗೆ ನೀರು ಹಾಕೋಣ.'

ಜಗದೀಶ ಚಮಚೆಯಿಂದ ನೀರು ಹಾಕಿದ. 'ಪಕ್ಕಾ ಜೀವ ಐತಿ' ಅಂದ. ಅರಿವಿಯಿಂದ ಒರೆಸಿ ಪಂಜಿ